4. Jamia Masjid, Mayasandra, Turuvekere Taluk
5. Jamia Masjid, Tandga, Turuvekere Taluk
6. Jamia Masjid, Dasehalli
7. Jamia Masjid, Beechnahalli
8. Jamia Masjid, Nagalapura
9. Jamai Masjid, Devinayakanahalli
10. Jamia Masjid, Chandur
11. Jamia Masjid, Doddamalligere
12. Suneri Masjid Akalsandra
13. Mecca Masjid, Taverekere Village, Turvekere Taluk

## ಗಿರಿಜನರಿಗೆ ಕೈಗೊಂಡ ಕಾರ್ಯಕ್ರಮಗಳು

621(816) ಶ್ರೀ ಮಹದೇವಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಡೀಪುರದಿಂದ ಸ್ಥಳಾಂತರಗೊಂಡ ಜನರಿಗೆ ಪುನರ್‌ವಸತಿ ಸೌಲಭ್ಯ ಒದಗಿಸಲು ಈವರೆಗೆ ವಿವಿಧ ಇಲಾಖೆಗಳಿಂದ ಕೈಗೊಂಡ ಕ್ರಮಗಳೇನು?

ಆ) ಇದರಿಂದ ಅವರ ಆರ್ಥಿಕ ಸ್ಥಿತಿ ಸುಧಾರಿಸಿದೆಯೇ?

ಇ) ಪುನರ್ವಸತಿಗೊಂಡ ಗಿರಿಜನರಿಗೆ ಗಿರಿಜನ ಉಪ ಯೋಜನೆಯಡಿಯಲ್ಲಿ ನೀಡಿರುವ ಜಮೀನಿಗೆ ಸೌರಶಕ್ತಿ ವಿದ್ಯುತ್ ಬೇಲಿ ನಿರ್ಮಿಸಲಾಗಿದೆಯೇ,

ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಬಂಡೀಪುರದಿಂದ ಕಾರೇಮಾಳ ಮತ್ತು ಮೇಲುಕಾಮನಹಳ್ಳಿಗೆ ಸ್ಥಳಾಂತರಿಸಲ್ಪಟ್ಟ ಗಿರಿಜನ ಕಾಲೋನಿಗಳಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಂಜೂರಾದ ಸವಲತ್ತುಗಳ ವಿವರ:

1) ಅರಣ್ಯ ಶಾಖೆ ಹುಲಿಯೋಜನೆ ಬಂಡೀಪುರ:

ಕಾರೇಮಾಳ 57 ಕುಟುಂಬ 1½ ಎಕರೆಯಂತೆ ಜಮೀನು ನೀಡಿದೆ ಮೇಲುಕಾಮನಹಳ್ಳಿ 30 ಜನರಿಗೆ 1½ ಎರಕೆಯಂತೆ ಜಮೀನು ನೀಡಿದೆ ಕಾರೇಮಾಳ ಮತ್ತು ಮೇಲುಕಾಮನಹಳ್ಳಿ ಗಿರಿಜನ ಕಾಲೋನಿಗೆ ಒಂದೊಂದು ಸಮುದಾಯ ಭವನ ನಿರ್ಮಿಸಿದೆ.

ಮೇಲುಕಾಮನಹಳ್ಳಿ ಕಾಲೋನಿ ಹಾಗೂ ಕಾರೇಮಾಳ ಕಾಲೋನಿಗಳಿಂದ ಸಂಪರ್ಕ ರಸ್ತೆ ನಿರ್ಮಾಣ ಮಾಡಿದೆ.

ಮೇಲು ಕಾಮನಹಳ್ಳಿ ಕಾಲೋನಿಗೆ ಎರಡು ಕೊಳವೆ ಬಾವಿ ಹಾಗೂ ಕಾರೇಮಾಳ ಗಿರಿಜನ ಕಾಲೋನಿಗೆ ಎರಡು ಕೊಳವೆ ಬಾವಿ ಮಾಡಿಸಿದೆ.

ಕಾರೇಮಾಳದಲ್ಲಿ ಶಾಲಾಕಟ್ಟಡ ನಿರ್ಮಾಣ ಮಾಡಲಾಗಿದೆ.

ಒಂದು ವರ್ಷ ಮೇಲುಕಾಮನಹಳ್ಳಿ ಗಿರಿಜನ ಕಾಲೋನಿ ಹಾಗೂ ಕಾರೇಮಾಳ ಗಿರಿಜನ ಕಾಲೋನಿಯ ಜನರ ಜಮೀನು ಉಳುಮೆ ಮಾಡಿಸಿ ಬಿತ್ತನೆ ಬೀಜ ಬಿತ್ತನೆ ಬೀಜು ಕೊಟ್ಟು ಬಿತ್ತನೆಯನ್ನು ಸಹ ಮಾಡಲಾಗಿರುತ್ತದೆ.

ವಿದ್ಯುತ್ ಸಂಪರ್ಕ ಮನೆಗಳಿಗೂ ಹಾಗೂ ಬೀದಿ ದೀಪಗಳನ್ನು ಅಳವಡಿಸಿ ಕೊಡಲಾಗಿದೆ.

2) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ (ಸಮಾಜ ಕಲ್ಯಾಣ ಇಲಾಖೆ ಗುಂಡ್ಲಪೇಟೆ)

ಕಾರೇಮಾಳ ಮತ್ತು ಮೇಲುಕಾಮನಹಳ್ಳಿ ಸ್ಥಳಾಂತರಿಸಲ್ಪಟ್ಟ ಗಿರಿಜನ ಕಾಲೋನಿಗಳಿಗೆ ಅರಣ್ಯ ಇಲಾಖೆಯ ವತಿಯಿಂದ ಈಗಾಗಲೇ ಕ್ರಮವಾಗಿ 64 ಮತ್ತು 36 ಕುಟುಂಬಗಳಿಗೆ ಮನೆ ನಿರ್ಮಾಣ ಮಾಡಿರುತ್ತಾರೆ. ಸದರಿ ಕಾಲೋನಿಗಳಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ ಈ ವರ್ಗದ ಅಭಿವೃದ್ಧಿಗಾಗಿ ಈ ಕೆಳಕಂಡ ಸವಲತ್ತುಗಳನ್ನು ಮಂಜೂರು ಮಾಡಿದೆ.

1. ಕಾರೇಮಾಳ ಮತ್ತು ಮೇಲುಕಾಮನಹಳ್ಳಿಯ 87 ಕುಟುಂಬಗಳಿಗೆ 8000-00 ರೂಪಾಯಿಗಳಂತೆ ಉಳುಮೆ ಎತ್ತುಗಳು (ಈ ಕಾರ್ಯಕ್ರಮದಲ್ಲಿ 80 ಫಲಾನುಭವಿಗಳಿಗೆ ವಿತರಣೆ ಮಾಡಿರುತ್ತದೆ. ಉಳಿದವರಿಗೆ ವಿತರಣೆ ಕಾರ್ಯ ಮುಂದುವರೆಯುತ್ತಿದೆ)
2. ಇದೇ ಎರಡು ಕಾಲೋನಿಯ 87 ಕುಟುಂಬಗಳಿಗೆ ವ್ಯವಸಾಯ ಉಪಕರಣಗಳನ್ನು ಮತ್ತು ಗೊಬ್ಬರ ಸಹ ನೀಡಲಾಗಿದೆ.
3. ಕಾರೇಮಾಳ ಕಾಲೋನಿಯ 14 ಕುಟುಂಬಗಳಿಗೆ ತಲಾ ರೂ. 20000-00ರಂತೆ ಮನೆ ನಿರ್ಮಿಸಿಕೊಡಲಾಗಿದೆ.
4. ಮೇಲುಕಾಮನಹಳ್ಳಿ ಕಾಲೋನಿಯ 14 ಕುಟುಂಬಗಳಿಗೆ ತಲಾ ರೂ. 20000-00ರಂತೆ ಮನೆ ನಿರ್ಮಿಸಿಕೊಡಲಾಗಿದೆ. ಈ ಎರಡೂ ಕಾಲೋನಿಗಳ ಕುಟುಂಬಗಳಿಗೆ ಜೀವನಾವಶ್ಯಕ ಪದಾರ್ಥಗಳಾದ ಅಕ್ಕಿ, ರಾಗಿ, ಕಾಳುಗಳು, ಅಡಿಗೆ ಎಣ್ಣೆ, ಸೋಪು ಸೀರೆ ಘಂಚೆ ಇತ್ಯಾದಿ ವಸ್ತುಗಳನ್ನು ಉಚಿತವಾಗಿ ಒಂದು ಬಾರಿ ವಿತರಿಸಲಾಗಿದೆ.
5. ಮೂರು ಗಿರಿಜನ ಮಹಿಳೆಯರಿಗೆ ಮೂರು ಹೊಲಿಗೆ ಯಂತ್ರಗಳನ್ನು ಉಚಿತವಾಗಿ ನೀಡಲಾಗಿದೆ.
6. ಮೇಲುಕಾಮನಹಳ್ಳಿ 4,300 ಮೀಟರ್ ಮತ್ತು ಕಾರೇಮಾಳ ಕಾಲೋನಿಗೆ 4,223 ಮೀಟರ್‌ನಂತೆ ಸ್ಥಳಾಂತರಗೊಂಡ ಗಿರಿಜನ ಫಲಾನುಭವಿಗಳಿಗೆ ಜಮೀನುಗಳಿಗೆ

ಸೋಲಾರ್ ತಂತಿ ಬೇಲಿ ಅಳವಡಿಸಲಾಗಿದೆ.

3) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ:

1. 3 ಫಲಾನುಭವಿಗಳಿಗೆ ಹಾಲು ಕರೆಯುವ ಮಿಶ್ರತಳಿ ಹಸುಗಳನ್ನು ನೀಡಲಾಗಿದೆ. ಹಸುಗಳ ಪಾಲನೆಯ ಬಗ್ಗೆ ತರಬೇತಿಯನ್ನು ಸಹ ನೀಡಲಾಗಿದೆ.

2. 23 ಫಲಾನುಭವಿಗಳಿಗೆ (ಕಾರೇಮಾಳ 11 ಮೇಲುಕಾಮನಹಳ್ಳಿ 12) ಸಾಮೂಹಿಕ ನೀರಾವರಿ ಕೊಳವೆಬಾವಿಯನ್ನು ಕೊರೆಯಿಸಿದ್ದು ಪೈಪ್‌ಲೈನ್ ಸಹಾ ಅಳವಡಿಸಲಾಗಿದೆ. ವಿದ್ಯುತ್ ಸಂಪರ್ಕ ಆಗಬೇಕಾಗಿದೆ.

4) ಒಣಭೂಮಿ ಅಭಿವೃದ್ಧಿ ಮಂಡಳಿ (ಡಿ.ಎಲ್.ಡಿ.ಬಿ.)

1. ಮೇಲುಕಾಮನಹಳ್ಳಿ ಹಾಗೂ ಕಾಲೇಜುಗಳಲ್ಲಿ ನೀಡಿರುವ ಜಮೀನುಗಳನ್ನು ಸಮತಟ್ಟು ಮಾಡುವ ಕಾರ್ಯಕ್ರಮ ಕೈಗೊಂಡಿದ್ದು ಪ್ರಗತಿಯಲ್ಲಿದೆ.

ಅ) ಹೌದು

ಆ) ಮೇಲುಕಾಮನಹಳ್ಳಿ 4300 ಮೀಟರ್ ಮತ್ತು ಕಾರೇಮಾಳ ಕಾಲೋನಿಗೆ 4223 ಮೀಟರ್‌ರಂತೆ ಗಿರಿಜನ ಫಲಾನುಭವಿಗಳಿಗೆ ಜಮೀನುಗಳುಗೆ ಸೋಲಾರ್ ತಂತಿ ಬೇರೆ ಅಳವಡಿಸಲಾಗಿದೆ.

ಇದಕ್ಕೆ ತಗಲಿರುವ ವೆಚ್ಚ ರೂ. 10 81,351-00 ಗಳು

## ಬಸವಕಲ್ಯಾಣದಲ್ಲಿ ಬೆಳ್ಳ ಬೆಳಕು ಕಾರ್ಯಕ್ರಮ

622(1007) ಶ್ರೀ ಎಂ.ಜಿ. ಮೂಳೆ (ಬಸವಕಲ್ಯಾಣ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವಕಲ್ಯಾಣ ಮತಕ್ಷೇತ್ರದ ಯಾವ ಯಾವ ಗ್ರಾಮಗಳನ್ನು ಬೆಳ್ಳ ಬೆಳಕು ಕಾರ್ಯಕ್ರಮಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ? ಇದಕ್ಕಾಗಿ ಎಷ್ಟು ಹಣವನ್ನು ಇಲ್ಲಿಯವರೆಗೆ ವೆಚ್ಚ ಮಾಡಲಾಗಿದೆ.

ಆ) ಈ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪಂಡರಗೇರಾ ಗ್ರಾಮದಲ್ಲಿ ಬೆಳ್ಳ ಬೆಳಕು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ವಿಳಂಬವಾಗುತ್ತಿರಲು ಕಾರಣಗಳೇನು, ಈ ಗ್ರಾಮದಲ್ಲಿ ಯಾವಾಗ ಬೆಳ್ಳ ಬೆಳಕು ಕಾರ್ಯಕ್ರಮವನ್ನು ಜಾರಿಗೊಳಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಪಂಡರಗೇರಾ ಗ್ರಾಮವನ್ನು ಬೆಳ್ಳ ಬೆಳಕು ಯೋಜನೆ ಅನುಷ್ಠಾನಕ್ಕೆ ಆಯ್ಕೆ ಮಾಡಲಾಗಿದ್ದು ಇಲ್ಲಿಯವರೆವಿಗೆ ರೂ. 1.50 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಆ) ಪಂಡರಗೇರಾ ಗ್ರಾಮದಲ್ಲಿ 15 ಮನೆಗಳ ನಿರ್ಮಾಣಕ್ಕೆ ನೀರಿನ ಅಭಾವದಿಂದ ಕಾಮಗಾರಿಗಳು ವಿಳಂಬವಾಗಿರುತ್ತದೆ. ಇದಾಗ್ಯೂ ಈಗಾಗಲೇ ಕರ್ನಾಟಕ ಭೂ ಸೇನಾ ನಿಗಮವು